## ಸಾಮರ್ಥ್ಯಾಧಾರಿತ ಅಭ್ಯಾಸ

ಅ.ಪದ್ಯವನ್ನು ಆಧರಿಸಿ ಈ ಘಟನೆಗಳನ್ನು ಅನುಕ್ರಮವಾಗಿ ಗುರುತಿಸಿ ಬರೆ.

:1.ತಂಗಿಯು ಗರಿಮುರಿ ಜರತಾರಿ ಲಂಗ ಹಾಕಿಕೊಂಡಳು.

2.ಪುಟಾಣಿ ತಂಗಿ ತನ್ನ ಗೆಳತಿ ಜೊತೆ ಎಳ್ಳು, ಬೆಲ್ಲ, ಬೀರಲು ಹೊರಟಳು.

3.ಎತ್ತು ಹಸು ಕರುಗಳನ್ನು ಕೊಂಬು ಹೆರೆದು ಬಣ್ಣವ ಬಳಿದು ಶೃಂಗಾರ ಮಾಡಿದರು.

4.ಮಕ್ಕಳನ್ನು ಹಸೆಯಲ್ಲಿ ಕೂರಿಸಿ, ಎಳ್ಳು-ಎಲಚಿ-ಅಚ್ಚುಗಳನ್ನು ಅಮ್ಮ ಅಜ್ಜಿ ಸುರಿಯುವರು.

---

## ಭಾಷಾಭ್ಯಾಸ

ಅ. ಕೆಳಗಿನ ವಾಕ್ಯಗಳನ್ನು ಆವರಣದಲ್ಲಿ ಕೊಟ್ಟಿರುವ ಸೂಚನೆಗಳಿಗೆ ಅನುಸಾರವಾಗಿ ಬರೆಯಿರಿ.

೧.ಹುಡುಗಿಯು ತರಕಾರಿಯನ್ನು ತಂದಳು
(ಇದನ್ನು ಪುಲ್ಲಿಂಗ ರೂಪದಲ್ಲಿ ಬರೆ)

ಉ: ಹುಡುಗನು ತರಕಾರಿಯನ್ನು ತಂದನು.

---

೨.ರಾಜು ಗಾಡಿಯನ್ನು ಎಳೆದನು
('ರಾಜು' ಎಂಬ ಪದದ ಬದಲಿಗೆ ' ಎತ್ತು' ಎಂಬ ಪದ ಬಳಸಿ)

ಉ: ಎತ್ತು ಗಾಡಿಯನ್ನು ಎಳೆಯಿತು.

---

೩.ಅಣ್ಣ ತಮ್ಮಂದಿರು ಸ್ನೇಹಿತರಂತೆ ಇದ್ದರು
( ಇದನ್ನು ಸ್ತ್ರೀಲಿಂಗ ರೂಪದಲ್ಲಿ ಬರೆ)

ಉ: ಅಕ್ಕ ತಂಗಿಯಂದಿರು ಸ್ನೇಹಿತೆಯರಂತೆ ಇದ್ದರು.

---

ಆ. ಕೆಳಗೆ ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಾಗಿ ವಿಂಗಡಿಸಿ ಬರೆ.

(ಪುಸ್ತಕ, ರಾಣಿ, ತಮ್ಮ, ಮೇಜು, ಗೋಡೆ, ರಾಜ, ತಂಗಿ, ಅಕ್ಕ, ತಮ್ಮ, ಶಾಲೆ, ಅಣ್ಣ, ತಂಗಿ, ತಂದೆ, ತಾಯಿ, ಸಹೋದರಿ, ಗೆಳೆಯ, ಕುರ್ಚಿ, ಗೆಳತಿ)

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| ತಮ್ಮ, ರಾಜ | ರಾಣಿ, ತಂಗಿ | ಪುಸ್ತಕ, ಮೇಜು |
| ಅಣ್ಣ, ತಂದೆ | ಅಕ್ಕ, ತಾಯಿ | ಗೋಡೆ, ಶಾಲೆ |
| ಗೆಳೆಯ | ಸಹೋದರಿ, ಗೆಳತಿ | ಕುರ್ಚಿ |

## ಭಾಷಾಚಟುವಟಿಕೆ

ಅ.ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಆರಿಸಿ ಬರೆ.

1.ಅಂತೂ - ಇಂತೂ
2.ಗರಿಮುರಿ - ಜರತಾರಿ
3.ಹಾಕಿಕೊಂಡು - ಮಾಡಿಕೊಂಡು
4.ಜೋಡಿ - ನೋಡಿ
5.ಅಚ್ಚು - ಮೆಚ್ಚು